# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 472**

**ಸದಸ್ಯರ ಹೆಸರು : ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)**

**ಉತ್ತರಿಸುವ ದಿನಾಂಕ : 22.12.2022**

**ಉತ್ತರಿಸುವವರು : ಸನ್ಮಾನ್ಯ ಮುಖ್ಯಮಂತ್ರಿಯವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮೀಣ ಭಾಗದಲ್ಲಿ ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರ ಯಾವ ಯಾವ ಯೋಜನೆಗಳನ್ನು ರೂಪಿಸಿದೆ; | ಗ್ರಾಮೀಣ ಭಾಗದಲ್ಲಿ ಅರಣ್ಯೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಅರಣ್ಯ ಇಲಾಖೆ ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>**ಅರಣ್ಯ ಪ್ರದೇಶಗಳಲ್ಲಿ**<br>1. ಕ್ಷೀಣಿತ ಅರಣ್ಯಗಳ ಅಭಿವೃದ್ಧಿ<br>2. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿ<br>3. ಸಿರಿಚಂದನ ವನ<br>4. ಪರಿಭಾವಿತ ಅರಣ್ಯ ಪ್ರದೇಶ<br>5. ಪರಿಹಾರ ಅರಣ್ಯೀಕರಣ<br>6. ದೇವರ ಕಾಡು<br>7. ಔಷಧೀಯ ಸಸ್ಯ ಸಂರಕ್ಷಣಾ ಪ್ರದೇಶಗಳು (MPCAs) ಮತ್ತು ಔಷಧೀಯ ಸಸ್ಯ ಅಭಿವೃದ್ಧಿ ಪ್ರದೇಶಗಳು (MPDAs) ನಿರ್ವಹಣೆ<br>**ಅರಣ್ಯೇತರ ಪ್ರದೇಶಗಳಲ್ಲಿ**<br>1. ಹಸಿರು ಕರ್ನಾಟಕ<br>2. ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ<br>3. ಇತರೆ ಪ್ರದೇಶಗಳಲ್ಲಿ ಅರಣ್ಯೀಕರಣ ಕಾಮಗಾರಿ<br>4. ನಗರ ಪ್ರದೇಶ ಹಸರೀಕರಣ<br>5. ಸಾರ್ವಜನಿಕರ ವಿತರಣೆಗಾಗಿ ಸಸಿಗಳನ್ನು ಬೆಳೆಸುವುದು.<br>6. ರಸ್ತೆಬದಿ ನೆಡುತೋಪು ನಿರ್ಮಾಣ<br>7. ಮಹಾತ್ಮಾ ಗಾಂಧಿ ಉದ್ಯೋಗ ಖಾತರಿ ಯೋಜನೆ,<br>8. ಎಸ್.ಎಂ.ಎ.ಎಫ್<br>9. ಟ್ರೀ ಪಾರ್ಕ್<br>10. ಸಮೃದ್ಧ ಹಸಿರು ಗ್ರಾಮ ಯೋಜನೆ<br>11. ತಾಲ್ಲೂಕಿಗೊಂದು ಹಸಿರು ಗ್ರಾಮ ಯೋಜನೆ<br>12. ನಗರವನ ಉದ್ಯಾನ ಯೋಜನೆ<br>13. ರಾಷ್ಟ್ರೀಯ ಅರಣ್ಯ ಕ್ರಿಯಾ ಯೋಜನೆ ಮತ್ತು ಬಿದಿರು ಅಭಿಯಾನ<br>14. ಕಾಂಡ್ಲಾವನ ಕ್ರಿಯಾ ಯೋಜನೆ<br>15. ಹಸಿರು ಭಾರತ ಅಭಿಯಾನ |

......2

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಗ್ರಾಮೀಣ ಭಾಗದಲ್ಲಿ ಮತ್ತು ರಸ್ತೆ ದುರಸ್ಥಿ ಹಾಗೂ ಅಗಲೀಕರಣ ಸಮಯದಲ್ಲಿ ಮರಗಳನ್ನು ಕಡಿಯುವುದು ಸಾಮಾನ್ಯವಾಗಿದ್ದು, ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; | ಸರ್ಕಾರದ ಆದೇಶ ಸಂಖ್ಯೆ:ಅಪಜೀ 168 ಎಫ್.ಡಿ.ಪಿ 2017, ದಿನಾಂಕ 06.12.2018 ಹಾಗೂ ಅಪಜೀ 39 ಎಫ್.ಡಿ.ಪಿ 2021, ದಿನಾಂಕ 26.07.2022ರಂತೆ ಗ್ರಾಮೀಣ ಭಾಗದಲ್ಲಿ ಮತ್ತು ರಸ್ತೆ ದುರಸ್ಥಿ ಹಾಗೂ ಅಗಲೀಕರಣ ಸಮಯದಲ್ಲಿ ಒಂದು ಮರ ಕಡಿದರೆ ಅದಕ್ಕೆ ಬದಲಾಗಿ 10 ಸಸಿಗಳನ್ನು ಸರ್ಕಾರಿ ಜಾಗದಲ್ಲಿ ನೆಡಲು ಒಂದು ಸಸಿಗೆ ರೂ. 411.27 ರಂತೆ ಅಂದರೆ 10 X ರೂ. 411.27= ರೂ. 4,112.70/- ಗಳನ್ನು ಸಂಬಂಧಿಸಿದ ಸಂಸ್ಥೆಗಳಿಂದ ಅರಣ್ಯ ಇಲಾಖೆಗೆ ಪಾವತಿಸಬೇಕಾಗಿರುತ್ತದೆ. ಅದಲ್ಲದೇ ಸದರಿ ಸಂಸ್ಥೆಯು ಪ್ರತಿ ಕಿ.ಮೀ ರಸ್ತೆಗೆ ರೂ. 3,00,000/-ರಂತೆ ಪಾವತಿಸಬೇಕಾಗಿರುತ್ತದೆ. ಈ ಮೊತ್ತವನ್ನು ಅದೇ ರಸ್ತೆ ಬದಿಗಳಲ್ಲಿ ಸಸಿಯನ್ನು ನೆಟ್ಟು ಬೆಳೆಸಲು ನಿರ್ಭಂದನೆ ಇರುತ್ತದೆ. |
| ಇ) | ಗ್ರಾಮೀಣ ಭಾಗದಲ್ಲಿ ಅರಣ್ಯೀಕರಣ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಗಿಡ/ಸಸ್ಯಗಳಿಗೆ ನಿರಂತರ ನೀರುಣಿಸುವುದು ಹಾಗೂ ನೆಟ್ಟಿರುವ ಗಿಡ/ಸಸ್ಯಗಳನ್ನು ಪೋಷಣೆ ಮಾಡದೇ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು? | ಗ್ರಾಮೀಣ ಭಾಗದಲ್ಲಿ ಅರಣ್ಯೀಕರಣ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಮಹಾತ್ಮಾ ಗಾಂಧಿ ಉದ್ಯೋಗ ಖಾತರಿ ಯೋಜನೆ ಹಾಗೂ ಎಸ್.ಎಂ.ಎ.ಎಫ್. ಯೋಜನೆಗಳಡಿ ನಿರ್ಮಾಣ ಮಾಡಿರುವ ನೆಡುತೋಪುಗಳಿಗೆ ಮೂರು ವರ್ಷಗಳ ನಿರ್ವಹಣೆ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳಲಾಗುತ್ತದೆ. |

ಸಂಖ್ಯೆ: ಅಪಜೀ 56 ಎಫ್‌ಟಿಪಿಎಸ್ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ